**ಇಂದು ದಿನಾಂಕ:18.09.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಸಿ.ಕೆ.ಎಂ.ವಕೀಲರಿಂದಃ**

ಸ.ನಂ.2 ರಲ್ಲಿ ಎಷ್ಟು ಪೋಡುಗಳಿವೆ ಎಂದು ಗೊತ್ತಿಲ್ಲ. 2 ನೇ ಪೋಡಿನಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದು ಗೊತ್ತಿಲ್ಲ. 2 ನೇ ಸರ್ವೆ ನಂಬರ್ ನಲ್ಲಿ ನನಗೆ ಜಮೀನು ಇರುವುದಿಲ್ಲ. ಈ ಕೇಸಿನ ಪ್ರತಿವಾದಿ 1 ಮತ್ತು 2 ರವರು ಗೊತ್ತು. ಪ್ರತಿವಾದಿಗಳಿಗೆ ಸ.ನಂ.2 ರಲ್ಲಿ ಜಮೀನು ಇದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಪೂರ್ವಕ್ಕೆ ವಸಂತರಾಜೇ ಅರಸ್ ರವರ ಜಮೀನು ಪಶ್ಚಿಮಕ್ಕೆ ಪಾಪೇಗೌಡರ ಜಮೀನು, ಉತ್ತರಕ್ಕೆ ಗವಿಗೌಡರ ಜಮೀನು, ದಕ್ಷಿಣಕ್ಕೆ ಹೊಲದೇಗೌಡರ ಜಮೀನು 2 ಎಕರೆ 7 ಗುಂಟೆ ಇದರಲ್ಲಿ ವಾದಿಗಳು ಉಳುಮೆ ಮಾಡುತ್ತಿದ್ದಾರೆಯೇ ಎಂದರೆ ಉಳುಮೆ ಮಾಡುತ್ತಿದ್ದಾರೆ. ವಾದಿಗಳು ಉಳುಮೆ ಮಾಡುತ್ತಿರುವ ಜಮೀನಿನ ಪಕ್ಕದಲ್ಲಿ ವಸಂತರಾಜೇ ಅರಸ್ ರವರಿಗೆ ಜಮೀನು ಇರುವುದಿಲ್ಲ. ಪಶ್ಚಿಮಕ್ಕೆ ಪಾಪೇಗೌಡರ ಜಮೀನು ಇದೆಯಾ ಎಂದರೆ ಗೊತ್ತಿಲ್ಲ. ಉತ್ತರಕ್ಕೆ ಗವಿಗೌಡರ ಜಮೀನು ಇದೆಯಾ ಎಂದರೆ ಗೊತ್ತಿಲ್ಲ, ದಕ್ಷಿಣಕ್ಕೆ ಹೊಲದೇಗೌಡರ ಜಮೀನು ಇದೆಯಾ ಎಂದರೆ ಕಲ್ಲೇಶರವರ ಜಮೀನು ಇದೆ. ಈಗ ಹೇಳಿದ ಚೆಕ್ಕುಬಂಧಿಯಲ್ಲಿ ಎಷ್ಟು ಎಕರೆ ಜಮೀನು ಇದೆ ಎಂದು ಗೊತ್ತಿಲ್ಲ. ಪೂರ್ವಕ್ಕೆ ಕರೀಗೌಡ ವಗೈರೆರವರ ಜಮೀನು, ಪಶ್ಚಿಮಕ್ಕೆ ಜವರೇಗೌಡರ ಜಮೀನು, ಉತ್ತರಕ್ಕೆ ಕರೀಗೌಡರ ಜಮೀನು ಮತ್ತು ದಕ್ಷಿಣಕ್ಕೆ ಲಕ್ಕೇಗೌಡರ ಜಮೀನು ಈ ಚೆಕ್ಕುಬಂಧಿಯೊಳಗೆ ಇರುವ ಜಮೀನನ್ನು ವಾದಿಗಳು ವ್ಯವಸಾಯ ಮಾಡುತ್ತಿರುವುದು ಉಂಟೇ ಎಂದರೆ ಹೌದು. ಅದರಲ್ಲಿ 36 ಗುಂಟೆ ಜಮೀನು ಇನ್ನೊಂದರಲ್ಲಿ 1 ಎಕರೆ 3½ ಗುಂಟೆ ಜಮೀನು ಉಳುಮೆ ಮಾಡುತ್ತಿದ್ದಾರೆ. ಸ.ನಂ.3 ರಲ್ಲಿ ಎಷ್ಟು ಎಕರೆ ಜಮೀನು ಮತ್ತು ಎಷ್ಟು ಪೋಡುಗಳು ಇವೆ ಎಂದು ಗೊತ್ತಿಲ್ಲ. ಯಾರು ಯಾರು

ಮಾಲೀಕರಾಗಿ ಸ್ವಾಧೀನರಿದ್ದಾರೆ ಎಂದರೆ ನಾನು ಕಲ್ಲೇಶ, ಕೃಷ್ಣೇಗೌಡ ಅಂದರೆ 1 ನೇ ಪ್ರತಿವಾದಿ ಮತ್ತು ಕರೀಗೌಡರು ಇದ್ದಾರೆ. ಸ.ನಂ.2 ಮತ್ತು 3 ರಲ್ಲಿ ಒಟ್ಟು ಎಷ್ಟು ಪೋಡುಗಳಾಗಿವೆ ಎಂದು ಗೊತ್ತಿಲ್ಲ. ಸ.ನಂ.2 ರಲ್ಲಿ ಯಾರು ಯಾರು ಮಾಲೀಕರಾಗಿ ಸ್ವಾಧೀನರಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಐಟಂ ನಂಬರ್ 1 ರ ಪೂರ್ವಕ್ಕೆ ನನಗೆ ಯಾವುದೇ ಜಮೀನು ಇರುವುದಿಲ್ಲ ವಾದಿ ಮತ್ತು ನಾನು ಸ್ನೇಹಿತರಾಗಿರುವುದರಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಅದಕ್ಕೆ ಮಾಹಿತಿಗಳನ್ನು ಲವ ಅವರು ಕೊಟ್ಟಿಲ್ಲ. ನಾನು ಲವ ಅವರ ಮಾತು ಕೇಳಿ ದಾವಾ ಆಸ್ತಿಗಳ ಸ್ವಾಧೀನದಲ್ಲಿ ವಾದಿಗಳು ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಆರ್ .ಟಿ.ಸಿಗಳನ್ನು ನೋಡಿಲ್ಲ. ದಾವಾ ಆಸ್ತಿಗಳಿಗೆ ವಾದಿಗಳು ಕಂದಾಯ ಕಟ್ಟುವುದನ್ನು ನೋಡಿಲ್ಲ. ನನ್ನ ಹೆಸರಿನಲ್ಲಿ 3 ಎಕರೆ 24 ಗುಂಟೆ ಜಮೀನು ಇದೆ. ನನ್ನ ಜಮೀನು 6 ಸರ್ವೆ ನಂಬರ್ ಗಳಲ್ಲಿ ಇದೆ. ಯಾರು ಯಾರು ಉಳುಮೆ ಮಾಡುತ್ತಾರೋ ಅವರವರ ಹೆಸರಿಗೆ ಆರ್.ಟಿ.ಸಿ ಬರುತ್ತದೆ ಎಂದರೆ ಸರಿ. ನಮ್ಮ ಜಮೀನನ್ನು ನಾನೇ ಉಳುಮೆ ಮಾಡುತ್ತೇನೆ ನನ್ನ ಹೆಸರಿನಲ್ಲಿ ಆರ್.ಟಿ.ಸಿ ಇದೆ. 1 ನೇ ಪ್ರತಿವಾದಿ ದಾವಾ ಆಸ್ತಿಗಳನ್ನು ಮೈತ್ರೇಯಮ್ಮರವರಿಂದ ಖರೀದಿಸಿದ್ದಾರೆ ಎಂದರೆ ಗೊತ್ತಿಲ್ಲ. ಖರೀದಿಸುವ ಮೊದಲು ಮೈತ್ರೇಯಮ್ಮರವರ ಹೆಸರಿನಲ್ಲಿ ರೆವಿನ್ಯೂ ಪಹಣಿಗಳು ಇತ್ತು ಎಂದರೆ ಗೊತ್ತಿಲ್ಲ. ವಾದಿ ಅಥವಾ ಅವರ ತಂದೆ ಹೆಸರಿನಲ್ಲಿರುವ ಖಾತೆ ಪಹಣಿಯನ್ನು ನಾನು ನೋಡಿಲ್ಲ ಆದರೆ ಅನುಭೋಗದಲ್ಲಿದ್ದಾರೆ. ಮೈತ್ರೇಯಮ್ಮ ಮಾರಾಟ ಮಾಡಿದ ನಂತರ ದಾವಾ ಆಸ್ತಿಯ ಪಹಣಿ 1 ನೇ ಪ್ರತಿವಾದಿಯ ಹೆಸರಿಗೆ ಬರುತ್ತಿದೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳನ್ನು ಪ್ರತಿವಾದಿಗಳೇ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸುಳ್ಳು. ಲವ ಅವರ ಮಾತು ಕೇಳಿ ವಾದಿಗಳೇ

ಮಾಲೀಕರಾಗಿ ಸ್ವಾಧೀನದಲ್ಲಿದ್ದಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ನನಗೆ ಎಲ್ಲಿಯೂ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**